ಕುಳಿತು ಭಿಕ್ಷುಕರನ್ನು ಬರಲು ಬಿಡದೆ ಓಡಿಸಿಬಿಡುತ್ತಾರೆ. ನನ್ನಂಥ ಬಡಮುಂಡೆಗೊಂದು ಊರೇನು? ಒಂದು ಮನೆಯೇನು?'

'ನಾಲಗೆ ತುಂಬಾ ಹರಿತ' ಅಂದ ಆತ ಇಂಗ್ಲಿಷಿನಲ್ಲಿ.

'ಇಂಗ್ಲಿಸಿನಲ್ಲೇಕೆ ಬೈತಿ ಸ್ವಾಮಿ? ನನಗಾ ಬಾಸೆ ಬರುತ್ತಾ ಏನು? ಏನೂ ತಿಳಿಯದ ಮುಂಡೆ, ಬಡಮುಂಡೆ.'

ಹೊರಗೆ ಕತ್ತಲಾಯಿತು. ಕತ್ತಲಾದಂತೆಲ್ಲ ಗಾಳಿ ಮತ್ತೂ ಬಲವಾಗಿ ಬೀಸುತ್ತಿತ್ತು. ರೈಲು ಎರೆಹುಳದಂತೆ ತೆವಳುತ್ತಿತ್ತು. ರಾವು ಅವರು ಇಳಿಯಬೇಕಿದ್ದ ನಿಲ್ದಾಣ ಹತ್ತಿರಾಗುತ್ತಿತ್ತು. ಆಸ್ತಿಕ ಸಂಘದ ಸದಸ್ಯರು ಯಾರಾದರೂ ಬಾರದಿರುವರೆ ಎಂದು ರಾವು ಅವರು ಆಸೆಯಿಂದ ಅಂದುಕೊಂಡರು. ಅವರ ಮನಸ್ಸು ಗೊಂದಲಗೊಳ್ಳುತ್ತಿತ್ತು. ತಾನೂ ತನ್ನ ಸಾಮಾನುಗಳು ರೈಲಿನಿಂದಿಳಿಯಬೇಕು. ಅದು ಸದ್ಯದ ಸಮಸ್ಯೆ. ಸಹಪ್ರಯಾಣಿಕರು ಸಹಾಯ ಮಾಡದಿರರು.

ಹೊರಗೆ ಗಾಳಿ, ಮುನಿದ ಮಹಾಸಾಗರದಂತೆ ಆರ್ಭಟಿಸುತ್ತಿತ್ತು. ಮರಗಳು ಉರುಳುತ್ತಿರುವ ಶಬ್ದದಂತಹುವೆಷ್ಟೋ ಗದ್ದಲದಲ್ಲಿ ಬೆರೆತುಹೋಗಿ ಹೊರಗೆ ಕೇಳಿಬರುತ್ತಿದ್ದವು. ಚಲಿಸುತ್ತಿದ್ದ ರೈಲು, ಗಾಳಿಗೆ ಕಾರಣೀಭೂತವಾದ ಮಾನವ ಬುದ್ಧಿ ಆ ಬಿರುಗಾಳಿ ಮಳೆಯಲ್ಲಿ ನಿರುಪಯುಕ್ತವಾಗಿಯೂ, ಅತ್ಯಲ್ಪವಾಗಿಯೂ ಅನ್ನಿಸಿತು. ಬೋಗಿಯಲ್ಲಿ ಕೊಂಚ ಸುಖವಾಗಿಯೇ ಇತ್ತು. ಆದರೆ ಅದರಿಂದ ಇಳಿದು ಹೋಗಬೇಕು.

ತಿರುಪೆಯವಳು ಬೋಗಿಯಲ್ಲಿ ಯುವದಂಪತಿಯ ಎದುರಿನಲ್ಲಿ ಮಧ್ಯೆ ಕುಳಿತಳು. ಕೊಂಚ ಸಮಯ ತಡೆದು, ಮತ್ತೆ ಪ್ರಾರಂಭಿಸಿದಳು.

'ಅಮ್ಮೋ ನನ್ನ ಮುದ್ದು ತಾಯಂದಿರಿದ್ದಾರೆ ಇಲ್ಲಿ. ನನ್ನ ಪ್ರೀತಿಯ ಸ್ವಾಮಿಗಳು ಸಹ ಇದ್ದಾರಿಲ್ಲಿ. ಇನ್ನೇಕೆ ನೋಡಲಿಲ್ಲ ಹುಚ್ಚುಮುಂಡೆಯನ್ನು? ಅಮ್ಮಾ ತಾಯೀ, ಸ್ವಾಮಿಗಳಿಗೆ ಹೇಳಿ ಕೊಂಚ ದುಡ್ಡು ಕೊಡಿಸು ತಾಯಿ. ಯಾಕಮ್ಮಾ ಹಾಗೆ ಮೋರೆ ತಿರುಗಿಸುವೆ? ಏನು, ಅಮ್ಮನಿಗೂ ಸ್ವಾಮಿಗಳಿಗೂ ಜಗಳ ಬಂದಿದೆಯೆ? ಸ್ವಾಮಿಗಳು ಸಿಗರೇಟು ಸೇದುತ್ತಾರೆ. ಅಮ್ಮ ಸೇದಲು ಬಿಡುವುದಿಲ್ಲ. ಅಬ್ಬಾ ಅಮ್ಮನಿಗೆ ನಗು ಬರುತ್ತಿದೆ.'

ಯುವತಿ ಮುಗುಳುನಗೆಯನ್ನು ತಡೆಯದಾದಳು. ಯುವಕ ಮನದುಂಬಿ ನಕ್ಕ. ಹೇಳಿದ,

'ನೀನು ನಮ್ಮ ಜೊತೆಯೇಕೆ ಬರಬಾರದು? ಕೆಲಸ ಕಾರ್ಯ ನೋಡಿಕೊಂಡಿರಬಹುದು. ಅನ್ನ, ಬಟ್ಟೆ ಕೊಡುತ್ತೇವೆ.'

'ಏನಾದರು ಕೊಟ್ಟು ಅವಳನ್ನು ಸಾಗಹಾಕಬಾರದೆ?' ಎಂದು ಗಂಡನನ್ನು ಉದ್ದೇಶಿಸಿ ಯುವತಿ ಹೇಳಿದಳು.

'ನನಗೆ ಗೊತ್ತು. ಅಮ್ಮನ ಮನಸ್ಸು ಕನಿಕರದ ಮನಸ್ಸು. ತಾತನವರೀಗ ನನಗೊಂದು ಆಣೆಗೆ ಕಡಿಮೆ ಕೊಡುವುದಿಲ್ಲ. ಹುಚ್ಚುಮುಂಡೆ ಆ ಸ್ವಾಮಿಗಷ್ಟು ಬೇಸರ ಬರುವಂತೆ ಮಾಡಬಾರದು. ಅಂಥ ಸ್ವಾಮಿಯವರು ಎಲ್ಲಿಯೂ ಇರಲಾರರು. ತಾತನವರು ಕರುಣೆ ಇರುವ ಪ್ರಭು.'

ರಾವು ಅವರ ಬಿಟ್ಟು ಉಳಿದವರೆಲ್ಲ ಅವಳಿಗೆ ಏನೋ ಕೊಟ್ಟರು. ಅವಳ ಮಾತುಗಳನ್ನು ಕೇಳುತ್ತಿದ್ದರೆ ಎಲ್ಲರಿಗೂ ತಮಾಷೆಯಾಗಿತ್ತು. ಆದರೆ ರಾವು ಅವರ ಮನಸ್ಸು ಅನ್ಯ ವಿಷಯಗಳತ್ತ ಹರಿದಿತ್ತು. ಅವರು ಗಾಳಿಮಳೆ ಕುರಿತು, ತಾನು ರೈಲಿನಿಂದ ಇಳಿಯುವ ಕುರಿತು ಆಲೋಚಿಸುತ್ತಿದ್ದರು.

ರೈಲು ನಿಂತಂತೆ ರಾವು ಅವರಿಗೆ ಒಂದು ಕ್ಷಣಕಾಲ ತಿಳಿಯಲಿಲ್ಲ. ಸರಿಯಾಗಿ ಆಗಲೇ ಮಳೆ ಮತ್ತೂ ತೀವ್ರಗೊಂಡಿತು. ಅವರು ಕೊಡೆಯನ್ನೊಂದು ಕೈಲಿ ಹಿಡಿದು ಎದ್ದರು. ಬಾಗಿಲು ತೆರೆಯುವುದರೊಂದಿಗೇ ಗಾಳಿ ಅವರನ್ನು ಜೋರಾಗಿ ಹಿಂದಕ್ಕೆ ತಳ್ಳಿತು. ಅವರು ತೂರಾಡಿದರು. ತಿರುಕಿ ಅವರ ಸಾಮಾನುಗಳನ್ನು ಇಳಿಸಿ ಹೋಗುವೆನೆಂದಳು. ರಾವು ಅವರಿಗೆ ಆ ಸಂದರ್ಭದಲ್ಲಿ ಒಳಿತು ಕೆಡುಕುಗಳನ್ನು ಆಲೋಚಿಸಲು ಅವಕಾಶವಿರಲಿಲ್ಲ. ಅವಳ ಸಹಾಯವನ್ನು ಅಂಗೀಕರಿಸದೆ ಇರಲಾಗಲಿಲ್ಲ. ಆದರೆ ಯಾವುದೋ ಅಸ್ಪಷ್ಟ ನಿಯಮವನ್ನು ಉಲ್ಲಂಘಿಸುತ್ತಿರುವಂತೆ ಅವರ ಮನಸ್ಸಿನಲ್ಲಿ ಕೊಂಚ ಬಾಧೆ ಉಂಟಾಯಿತು. ಆದರೆ ಅವರು ರೈಲಿನಿಂದಿಳಿದು ನಿಲ್ದಾಣದೊಳಕ್ಕೆ ಓಡಿ ಹೋದರು. ತಿರುಕಿ ಅವರ ಸಾಮಾನುಗಳನ್ನು ನಿರೀಕ್ಷಣಾ ಕೊಠಡಿಯಲ್ಲಿಟ್ಟಳು.

ನಿಲ್ದಾಣದಲ್ಲೆಲ್ಲೂ ಒಂದು ದೀಪವಿಲ್ಲ. ರಾವು ಅವರು ಕೊಂಚ ಹಣ ತೆಗೆದು ಅವಳಿಗೆ ಕೊಡಲು ಹೋದರು. ಅವಳು ಬೇಡವೆನ್ನಲಿಲ್ಲವಾದರೂ ಕೇಳಿಸದಂತೆ ಏನನ್ನೋ ಹೇಳಿ ಥಟ್ಟನೆ ಮಾಯವಾದಳು.